ಶ್ರೀ ಸಿ. ಆರ್. ರಂಗೇಗೌಡ.—ಈ ಪ್ರದೇಶದಲ್ಲಿ ಎಷ್ಟು ಪಿಕ್ ಅಪ್ ಆಗಿವೆ ? ಎಷ್ಟು ಹಣ ನಿರ್ದಿಷ್ಟವಾಗಿ ಕೊಡರಾಗಿದೆ ?

ಶ್ರೀ ಆಲೂರು ಹನುಮಂತಪ್ಪ.—ಬೇರೆ ಪ್ರಶ್ನೆ ಕೇಳಿದರೆ ಎವರ ಕೊಡುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ.—ಹಳೇ ಕೆರೆಗಳನ್ನು ರಿಸ್ಟೋರ್ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಕೆರೆ ರಿಸ್ಟೋರೇಶನ್ ಮಾಡುವುದಕ್ಕೆ ಅಡ್ಡಿ ಇಲ್ಲ.

ಶ್ರೀ ಸಿ. ಆರ್. ರಂಗೇಗೌಡ.—'ಬಿ' ಪ್ರಶ್ನೆಗೆ ಉತ್ತರ 'Yes' ಎಂದು ಇದೆ. ಇದಕ್ಕೆ ಏನು ಅರ್ಥ, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಇದು ಶಾಶ್ವತವಾದ ನಿರ್ಬಂಧವಲ್ಲ. ಕಾವೇರಿ ಯೋಜನೆ ಕಾರ್ಯಗತವಾಗತಕ್ಕ ಸಂದರ್ಭದಲ್ಲಿ ಸರ್ಕಾರ ಮನಸ್ಸು ಮಾಡಿದರೆ ಈ ನಿರ್ಬಂಧ ರಿಲ್ಯಾಕ್ಸ್ ಮಾಡಬಹುದು. We can relax the rule to see that small pick-ups and small tanks are constructed. So also with Kanva. When Manchanabele anicut is constructed, we can think of Madabal Hobli in Magadi Taluk.

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ಮತ್ತು ರಾಮನಗರ ತಾಲ್ಲೂಕುಗಳಲ್ಲಿ ನಿಷೇಧಿಸರಾಗಿರುವ ಪ್ರದೇಶದ ವಿಸ್ತೀರ್ಣ ಎಷ್ಟು ಎಂಬುದಕ್ಕೆ ಅಂಕಿ ಅಂಶ ಕೊಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಈಗ ಎವರ ಇಲ್ಲ. ಬೇಕಾದರೆ ಅದನ್ನು ಮಾನ್ಯ ಸದಸ್ಯರಿಗೆ ಒದಗಿಸಿ ಕೊಡುತ್ತೇನೆ.

Amount earmarked for Minor Irrigation Works.

*Q.—261. Sri R. S. HEGDE (Honnavar).—

Will the Government be pleased to state :—

(*a*) the amount earmarked for the minor irrigation works in the North Kanara District during the current financial year ;

(*b*) the number of fresh works that are being executed this year within the financial allocation (a list of the works may be given) ?

A.—Sri ALUR HANUMANTHAPPA (Deputy Minister for Minor Irrigation).—

(*a*) Rs. 19,75,000.

(*b*) In view of limited funds under minor irrigation, stress has been laid on completion of incomplete works. In view of emergency and widespread failure of rains instructions have been issued to P.W.D. officers to take up in consultation with Revenue Department such of the works which could be completed by June 1966. The Department is taking steps consistent with availability of funds. The details are not available.

Sri R. S. HEGDE.—Out of Rs. 19,71,000, what is the amount expended so far and what is the acreage irrigated ?

† Sri ALUR HANUMANTHAPPA.—The amount expended, up-to-date information is not available. Even the area under irrigation will be collected a little later.

Sri R. S. HEGDE.—It is said that the Government have sanctioned certain amount on fresh works in view of the emergency. What is the amount sanctioned ?

Sri ALUR HANUMANTHAPPA.—Districtwise information I have got. For North Kanara we have sanctioned estimates worth 27,81,000.

Sri R. S. HEGDE.—What are the fresh works sanctioned ?

Sri ALUR HANUMANTHAPPA.—Already we have sent this list to the circles and asked them to start work from the commencement of the current month up to next year.

Mr. SPEAKER.—That is not satisfactory. The Hon'ble Member is entitled to get that list. He is entitled to ask for that information. The Hon'ble Deputy Minister may kindly give it to him.

Sri ALUR HANUMANTHAPPA.—If the Member wants it, I can give it.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—19,75,000 ರೂಪಾಯಿ ಒದಗಿಸಿರತಕ್ಕ ಹಣದಲ್ಲಿ ಎಷ್ಟು ಖರ್ಚಾಗಿದೆ ? ಎಷ್ಟು ಎಕರೆ ಹೊಸ ಅಚ್ಚುಕಟ್ಟು ರಿಸ್ಟೋರೇಶನ್ ಮಾಡುವುದರಲ್ಲಿ ಬಂದಿದೆ ?

Sri ALUR HANUMANTHAPPA.—These are details. I have got detailed information. I can furnish to the Hon'ble Member.

Mr. SPEAKER.—If it is a long list, he may please lay it on the Table, so that everybody mayseeintoit.

Sri ALUR HANUMANTHAPPA.—Yes, Sir. I will place it on the Table.

ಶ್ರೀ ಎಸ್. ಗೋಪಾಲಗೌಡ.—ಉತ್ತರ ಕನ್ನಡ ಜಿಲ್ಲೆಯು ಮಲೆನಾಡು ಪ್ರದೇಶವಾಗಿರುವುದರಿಂದ ಅಲ್ಲಿ ಯಾವ ಯಾವ ನಣ್ಣ ನೀರಾವರಿ ಕಾಮಗಾರಿಗಳಿಗೆ ಎಷ್ಟು ಹಣ ಇದುವರೆಗೆ ಖರ್ಚು ಆಗಿದೆ?

ಶ್ರೀ ಆಲೂರು ಹನುಮಂತಪ್ಪ.—ಮಲೆನಾಡು ಪ್ರದೇಶದಲ್ಲಿ ಕೆರೆ ಕನ್‌ಸ್ಟ್ರಕ್ಷನ್ ಕೆಲಸ ಇರುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಉಪ್ಪು ನೀರು ಇರುವುದರಿಂದ ಅಲ್ಲಿ ರ್ಯಾಂಡ್ ರಿಸ್ಟೋರೇಶನ್ ಕೆಲಸ ಇರುತ್ತದೆ. ಅವಶ್ಯಕತೆ ಇರುವ ಕಡೆ ಪಿಕ್ ಅಪ್ ಹಾಕಬೇಕಾಗುತ್ತದೆ. ಬಾವಿಗಳನ್ನು ತೆಗೆಯಿಸಬೇಕಾಗುತ್ತದೆ. ಈ ಕೆಲಸ ಕಾರ್ಯಗಳನ್ನು ಮಾಡಬೇಕಾಗುತ್ತದೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಇದಕ್ಕಾಗಿ ಒದಗಿಸಿರತಕ್ಕ ಹಣದಲ್ಲಿ ಖರ್ಚು ಮಾಡಿರುವುದು ಎಷ್ಟು ?

ಶ್ರೀ ಆಲೂರು ಹನುಮಂತಪ್ಪ.—ಡೀಟೇಲ್ಸ್ ಬೇಕಾದರೆ ಒದಗಿಸುತ್ತೇನೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನಣ್ಣ ನೀರಾವರಿ ಯೋಜನೆಗಾಗಿ ಕೇಂದ್ರ ಸರ್ಕಾರ ಒದಗಿಸಿರತಕ್ಕಂಥ ಹಣ ಖರ್ಚು ಆಗದೆ ಕೆಲವು ಪೊಬಲಗು ವಾಪಸು ಆಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ! ವಾಪಸು ಹಣ ಎಷ್ಟು !

ಶ್ರೀ ಆಲೂರು ಹನುಮಂತಪ್ಪ.—ಮೂರನೇ ಯೋಜನೆಯಲ್ಲಿ ಎಂಟೂವರೆ ಕೋಟಿ ರೂಪಾಯಿ ಇದಕ್ಕಾಗಿ ಹಣ ಇತ್ತು. ಹದಿನಾರು ಕೋಟಿ ರೂಪಾಯಿ ಖರ್ಚು ಮಾಡಿದೆ. ಅಡಿಷನರ್ ಗ್ರ್ಯಾಂಟ್ ಈ ವರ್ಷ ಕೇಳರಾಗಿದೆ. Anticipated is three crores. We got another crore from the Government of India in August and September. We have utilised that. Again in the month of December the State Government gave two crores in view of the emergency conditions. We have sanctioned new estimates worth nearly 4.50 crores, for the entire State. That does not mean to say we have surrendered money. We have made use of the money that is available for irrigation works in the same category of minor irrigation.

ಶ್ರೀ ಎಸ್. ಪಿ. ಫಾಯಿದೆ.—ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲಸ ನಿಧಾನವಾಗುವುದರಿಂದ ಒದಗಿಸಿದ ಹಣ ಖರ್ಚು ಆಗುವುದಿಲ್ಲ ಅಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಸ್ವಲ್ಪಮಟ್ಟಿಗೆ ಉತ್ತರಕನ್ನಡ ಜಿಲ್ಲೆಯಲ್ಲಿ ನಂಡಾರ ಸೌಕರ್ಯ ಸರಿಯಾಗಿ ಇಲ್ಲದ ಮೂಲಕ ಆಗಿದೆ. ಆದಷ್ಟು ಜಾಗ್ರತೆ ಕೆಲಸ ಕಾರ್ಯಗಳು ಆಗಬೇಕು ಎಂದು ತಿಳಿಸಿದ್ದೇವೆ. ಸಿಬ್ಬಂದಿ ಕೂಡ ಜಾಸ್ತಿ ಮಾಡಿದೆ. ಆದಷ್ಟು ಜಾಗ್ರತೆ ಕೆಲಸ ಮುಗಿಯಬಹುದು ಎಂದು ಅನ್ನಿಸುತ್ತದೆ.

ಶ್ರೀ ಜಿ. ವಿ. ಗೌಡ.—ಹದಿನಾರು ಕೋಟಿ ರೂಪಾಯಿ ನಣ್ಣ ನೀರಾವರಿಗಾಗಿ ಖರ್ಚು ಮಾಡಿದ್ದೇವೆ ಎಂದು ಉತ್ತರ ಹೇಳಿದರು. ಹಾಗಾದರೆ ನಣ್ಣ ನೀರಾವರಿ ಯೋಜನೆಯಿಂದ ಎಷ್ಟು ಆಹಾರ ಧಾನ್ಯ ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗಿದೆ ?

Mr. SPEAKER.—The question relates to North Kanara and the Hon'ble Minister has said that he has not surrendered any amount at all.

Sri G. V. GOWDA.—The Hon'ble Minister has said that they have exceeded the target. I wish to know what is the amount expended and what is the food production that we have brought about as a result of spending this money.

Mr. SPEAKER.—It may be important. But is it a proper supplementary in regard to the question relating to North Kanara ?

ಶ್ರೀ ಎಸ್. ಗೋಪಾಲಗೌಡ.—(ಅ) ಪ್ರಶ್ನೆಗೆ ಉತ್ತರ ಹೀಗೆ ಇದೆ. ನಣ್ಣ ನೀರಾವರಿ ಯೋಜನೆ ಸಂಬಂಧದಲ್ಲಿ ಕಡಮೆ ಪ್ರಮಾಣದ ಹಣವಿರುವುದರಿಂದ, ಅಪೂರ್ಣವಾಗಿರುವ ಕಾಮಗಾರಿಗಳನ್ನು ಪೂರೈಸುವ ಬಗ್ಗೆ ಒತ್ತಾಯ ಮಾಡಲಾಗಿದೆ. ಜೂನ್ ಒಳಗೆ ಪೂರೈಸಬಹುದಾದಂತಹ ಕಾಮಗಾರಿಗಳನ್ನು, ಕಂದಾಯ ಇಲಾಖೆಯೊಡನೆ ಸಮಾರೋಚಿಸಿ ಕೈಕೊಳ್ಳಬೇಕೆಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆಗಳನ್ನು ಕೊಡಲಾಗಿದೆ. ಯಾವ ಅಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ ? ಆ ಅಧಿಕಾರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆ ? ಅಪೂರ್ಣವಾದ ಕಾಮಗಾರಿಗಳು ಆ ಜಿಲ್ಲೆಯಲ್ಲಿ ಎಷ್ಟು ಇವೆ ? ಹಣ ಎಷ್ಟು ಒದಗಿಸಿದ್ದಿರಿ ? ಎಷ್ಟು ಖರ್ಚು ಮಾಡಿದ್ದಾರೆ ? ಎಷ್ಟು ಕಾಮಗಾರಿಗಳನ್ನು ಮಾಡಿ ಮುಗಿಸಿದ್ದೀರಿ ? ಈ ಉತ್ತರ ಕೊಡುವುದಕ್ಕೆ ಸಾಧ್ಯವಿದೆಯೇ ಸರಕಾರಕ್ಕೆ ?

ಶ್ರೀ ಆಲೂರು ಹನುಮಂತಪ್ಪ.—ಹಳೆಯ ಕೆಲಸಗಳನ್ನು ಮುಗಿಸಬೇಕು ಎನ್ನುವ ಆದೇಶವನ್ನು ಕೊಟ್ಟಿರುವುದು ಎರಡು ವರ್ಷಗಳಿಂದ. ಅದಕ್ಕೆ ವರ್ಷ್ಕೇ ವರ್ಷ್ಕೇ ಬೇಕಾದಂಥ ಹಣವನ್ನು ಕಂತುಗಳಲ್ಲಿ ಕೊಡುತ್ತಿದ್ದೇವೆ. ಮತ್ತು ಅಭಾವ ಸಂದರ್ಭದಲ್ಲಿ ಉದ್ಯೋಗತಕ್ಕ ಕೆಲಸಕಾರ್ಯಗಳ ಗ್ರೋಸ್ತರ ದೇಶಾದ್ಯಂತ ರೆವೆನ್ಯೂ ಇಲಾಖೆಯ ಅಧಿಕಾರಿಗಳು ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಯ ಅಧಿಕಾರಿಗಳು ತ್ವರಿತವಾಗಿ ಕೆಲಸಗಳನ್ನು ಕೈಕೊಂಡು ಜನಗಳಿಗೆ ಕೂಲಿಯನ್ನು ಒದಗಿಸಲು ವ್ಯವಸ್ಥೆ ಮಾಡಲಾಗಿದೆ. ಇದಲ್ಲದೆ 21,81,000 ರೂಪಾಯಿಗಳ ಹೊಸ ಕೆಲಸಗಳು ಮಂಜೂರಾಗಿವೆ. ಅವುಗಳನ್ನು ಮುಂದಿನ ವರ್ಷ ಕಾರ್ಯಗತ ಮಾಡುತ್ತೇವೆ.

ಶ್ರೀ ಎಸ್. ಪಿ. ಫಾಯಿದೆ.—ಕೆಲಸಗಳು ಆಗುವುದರಲ್ಲಿ ವಿಳಂಬವಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅಲ್ಲಿರುವ ಅಸಿಸ್ಟೆಂಟ್ ಇಂಜಿನಿಯರ್ ಅವರಿಗೆ ವಾಹನ ಸೌಕರ್ಯವಿಲ್ಲದೆ ಇರುವುದರಿಂದ ಸ್ಥಳಗಳಿಗೆ ಭೇಟಿ ಕೊಟ್ಟು ಕೆಲಸಕಾರ್ಯಗಳನ್ನು ಮಾಡುವುದರಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ವಾಹನವಿಲ್ಲದೆ ಇದ್ದರೆ ಆತ ಜರೂರಾಗಿ ವಾಹನವನ್ನು ಕೊಡಿಸೋಣ.